ಬೈಂದೂರು ವಿಧಾನ ಸಭಾ ವ್ಯಾಪ್ತಿಯ ಮರವಂತೆ ಕಡಲು . ಕಿನಾರೆಯ ಪ್ರವಾಸೋದ್ಯಮ ಅಭಿವೃದ್ಧಿ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 726(1)

ಸದಸ್ಯರ ಹೆಸರು : ಶ್ರೀ ಗೋಪಾಲ ಪೂಜಾರಿ ಕೆ.(ಬೈಂದೂರು)

ಉತ್ತರಿಸುವ ಸಚಿವರು : ಶ್ರೀ ಆರ್.ರೋಷನ್‌ಬೇಗ್(ಪ್ರವಾಸೋದ್ಯಮ ಮತ್ತು ಹಜ್ ಸಚಿವರು)

ಪ್ರಶ್ನೆ

ಅ) ಬೈಂದೂರು ವಿಧಾನ ಸಭಾ ವ್ಯಾಪ್ತಿಯ ಮರವಂತೆ ಕಡಲು ಕಿನಾರೆಯ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು?

ಆ) ಇಲ್ಲದಿದ್ದಲ್ಲಿ ಕಾರಣಗಳೇನು?

ಇ) ಯಾವಾಗ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗುವುದು?

ಉತ್ತರ

ಅ) 1) ಮರವಂತೆಯಲ್ಲಿ ಯಾತ್ರಿ ನಿವಾಸ ನಿರ್ಮಿಸಲು ಕೇಂದ್ರ ಸರ್ಕಾರದಿಂದ 1996-97ನೇ ಸಾಲಿನಲ್ಲಿ ಮಂಜೂರಾತಿ ಪಡೆದಿದ್ದು ಈ ಪ್ರದೇಶವು ಸಿ.ಆರ್.ಜಡ್. ವ್ಯಾಪ್ತಿಗೆ ಒಳಪಡುವುದರಿಂದ ಸದರಿ ಯೋಜನೆಯನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ.

2) ಮರವಂತೆ ಕಡಲು ತೀರಕ್ಕೆ ಹೊನಲು ಬೆಳಕಿನ ವ್ಯವಸ್ಥೆಗಾಗಿ ಕೇಂದ್ರ ಸರ್ಕಾರ ಮಂಜೂರು ಮಾಡಿದ್ದು ಸದ್ಯದಲ್ಲಿಯೇ ಟೆಂಡರ್ ಕರೆದು ಈ ಕಾರ್ಯ ಕೈಗೆತ್ತಿಕೊಳ್ಳಲಾಗುವುದು.

ಆ) ಈ ಪ್ರದೇಶವು ಸಿ.ಆರ್.ಜಡ್.ಗೆ ಒಳಪಟ್ಟಿರುವುದರಿಂದ ಕಡಲು ತೀರವನ್ನು ಇನ್ನೂ ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿಪಡಿಸುವುದು ಸಾಧ್ಯವಾಗಿಲ್ಲ. ಕಾರಣ ಸಿ.ಆರ್.ಜಡ್. ಕಾನೂನನ್ನು ಸಡಿಲಗೊಳಿಸಲು ಕೇಂದ್ರ ಸರ್ಕಾರದೊಡನೆ ಪ್ರಯತ್ನ ನಡೆದಿರುತ್ತದೆ.

ಇ) ಕೇಂದ್ರ ಸರ್ಕಾರ ಸಿ.ಆರ್.ಜಡ್. ಕಾನೂನು ಸಡಿಲಗೊಳಿಸಿದ ತಕ್ಷಣ ಈ ಪ್ರದೇಶವನ್ನು ಅಭಿವೃದ್ಧಿಪಡಿಸಲು ಕ್ರಮ ಜರುಗಿಸಲಾಗುವುದು.